2) ಹೊಸ ಕಟ್ಟಡ ನಿರ್ಮಿಸಲು ಲೋಕೋಪಯೋಗಿ ಇಲಾಖೆಯಿಂದ ರೂ. 100.00 ಲಕ್ಷಗಳ ನಕ್ಷೆ ಮತ್ತು ಅಂದಾಜುಗಳ ಪಟ್ಟಿಯನ್ನು ಪಡೆಯಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎನ್. ವೈ. ಗೋಪಾಲಕೃಷ್ಣ: ಮೊಳಕಾಲ್ಮೂರು ಟೌನ್‌ನಲ್ಲಿ ಫಸ್ಟ್ ಗ್ರೇಡ್ ಕಾಲೇಜು ಕೊಟ್ಟು ಸುಮಾರು 10-15 ವರ್ಷಗಳಾಗಿರಬೇಕು. ಕಾಲೇಜಿಗೆ ಕಟ್ಟಡ ಇಲ್ಲದೆ ಕಾಲೇಜು ಹುಡುಗರು ಎಲ್ಲಾ ವಂತಿಗೆ ಮೇಲೆ ಇಟ್ಟುಕೊಂಡಿರುವ ಶಾಲಾ ಕೊಠಡಿಗಳಲ್ಲಿ ಪ್ರೈಮರಿ ಶಾಲಾ ಕಟ್ಟಡಗಳಲ್ಲಿ ಕೆಲವು ಮರಗಳ ಕೆಳಗಡೆ ಕಾಲೇಜನ್ನು ನಡೆಸುತ್ತಿದ್ದಾರೆ. ಒಂದು ಕೋಟಿ ರೂಪಾಯಿ ಕಾಲೇಜು ಕಟ್ಟಡಕ್ಕೋಸ್ಕರ ಏನು ಒದಗಿಸಿದ್ದೇವೆಂದು ಹೇಳುತ್ತಿದ್ದಾರೆ ಅದೆಲ್ಲಾ ಅಂಡರ್ ಕನ್ಸಿಡರೇಷನ್ ಅಂಡರ್ ಎಕ್ಸಮಿನೇಷನ್ ಎಂದು ಹೇಳುತ್ತಿದ್ದಾರೆ. ಒಂದು ಕೋಟಿ ರೂಪಾಯಿ ಸರಕಾಲಕ್ಕೆ ಕೊಡುವುದಕ್ಕೆ ಆಗದಿದ್ದರೂ ಕೂಡ ಎಷ್ಟು ಸಾಧ್ಯವೋ ಅಷ್ಟನ್ನು ನೀಡಿ ಕನಿಷ್ಠ 2-3 ಶಾಲಾ ಕೊಠಡಿಗಳನ್ನು ಕಟ್ಟಿಸಿಕೊಟ್ಟರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ: ಮಾನ್ಯ ಶಾಸಕರು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ ನನಗೆ ಸಂತೋಷವಾಗುತ್ತದೆ. 50 ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಇತ್ತು. ಲೋಕೋಪಯೋಗಿ ಇಲಾಖೆಯ ಒಂದು ಕಟ್ಟಡಕ್ಕೆ ಒಂದು ಕೋಟಿ ರೂಪಾಯಿ ಒದಗಿಸತಕ್ಕಂತಹ ವ್ಯವಸ್ಥೆ ಮಾಡಿದ್ದಾರೆ. ಇಂತಹ ವ್ಯವಸ್ಥೆ ಮಾಡಿದರೂ ಕೂಡ ಹಣ ನಮ್ಮಿಂದಲೇ ಹೋಗಬೇಕು. ತಾವೇನು ಅರ್ಥ ಮಾಡಿಕೊಂಡು ಹೇಳಿದ್ದೀರಿ, ಇದನ್ನು ಕಡಿಮೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಲೋಕೋಪಯೋಗಿ ಇಲಾಖಾ ಧಿಕಾರಿಗಳನ್ನು ಕರೆಯಿಸಿ ಈ ರೀತಿ ಅಂದಾಜು ಮಾಡಿದರೆ 25-30 ಕೋಟಿ ಕೂಡ ಸಾಕಾಗುವುದಿಲ್ಲ. ಮುಂದಿನ ಸಾಲಿಗೆ 3 ಕೋಟಿ ಇರತಕ್ಕಂಥಾದ್ದು ಸುಮಾರು 40 ಕೊಠಡಿಗಳ ಅರ್ಧಂಬರ್ಧವಾಗಿದೆ. ಒಂದೊಂದು ಕಟ್ಟಡಕ್ಕೆ 8-10 ಲಕ್ಷ ರೂಪಾಯಿ ಸ್ಟಿಲ್ ಓವರ್ ವರ್ಕ್ಸ್‌ಗೆ ಬೇಕಾಗುತ್ತದೆ. ಬೇರೆ ಕಡೆ ಶಾಲೆಗಳು ನಡೆಯುತ್ತಿದೆ ಅವರಿಗೆ ಗೊತ್ತಿದೆ ನನಗೂ ಗೊತ್ತಿದೆ. ಗ್ರಾಮ ಪಂಚಾಯಿತಿ ಕಛೇರಿಗಳು ಇನ್ನೊಂದು ಕಡೆ ಕಾಲೇಜುಗಳು ನಡೆಯುತ್ತಿದೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ಅಧಿಕಾರಿಗಳನ್ನು ಇನ್ನು 8-10 ದಿವಸದಲ್ಲಿ ಕರಿಸಿ ಕಡಿಮೆ ಖರ್ಚಿನಲ್ಲಿ 1-2 ರೂಮ್ಸ್‌ಗಳನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಸುರತ್ಕಲ್ ಆಸ್ಪತ್ರೆಯ ಬಗ್ಗೆ

107 (352) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಸುರತ್ಕಲ್ ಪೇಟೆಯ ಮಧ್ಯೆ ಇರುವ ಸರ್ಕಾರೀ ಆರೋಗ್ಯ ಕೇಂದ್ರದ ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಔಷಧ ವಿತರಣೆಯಲ್ಲಿ ಅಸಮರ್ಪಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ನೀರಿನ ವ್ಯವಸ್ಥೆ ಇಲ್ಲದೆ ಆರೋಗ್ಯ ಕೇಂದ್ರದ ಸಿಬ್ಬಂದಿ ಮತ್ತು ರೋಗಿಗಳು ತೊಂದರೆ ಅನುಭವಿಸುತ್ತಿರುವುದು ನಿಜವಲ್ಲವೆ?

4) ಕಟ್ಟಡ ರಿಪೇರಿಗಾಗಿ ಮತ್ತು ಇತರೇ ಕೊರತೆಗಳ ನಿವಾರಣೆಗಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳು

ಯಾವುವು? ಯಾವಾಗ ಕಾರ್ಯಕತಗೊಳ್ಳುವುದು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಬಂದಿದೆ

2) ಇಲ್ಲ

3) ಹೌದು

4) ನೀರಿನ ವ್ಯವಸ್ಥೆ ಮತ್ತು ಕಟ್ಟಡ ದುರಸ್ತಿ ಬಗ್ಗೆ 1998-99ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಕ್ರಿಯಾಯೋಜನೆಯಲ್ಲಿ ಕಾಮಗಾರಿ ಅಳವಡಿಸಿಕೊಂಡು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಜಯರಾಮ ಶೆಟ್ಟಿ : ಸರಕಾರದ ಉತ್ತರ ನೋಡುವಾಗ ಹೌದಾ ಬಸವಣ್ಣ ಹೌದು ಇಲ್ಲ ಬಸವಣ್ಣ ಇಲ್ಲ ಎನ್ನುವ ರೀತಿಯಲ್ಲಿ ಇದೆ. ಹೌದು ಬಂದಿದೆ ಎಲ್ಲ ಎಂದು ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಸೂರತ್ಕಲ್ ಈಗ ಬೆಳೆಯುತ್ತಿರುವ ನಗರ ಅಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಾಮಾನ್ಯ ಜನರ ಸಾಮಾನ್ಯ ಖಾಯಿಲೆಗಳಿಗೆ ಮೆಡಿಸನ್ನಿನ ತೊಂದರೆ ಇದೆ. ಬಹಳಷ್ಟು ಸಮಯದಿಂದ ಇಂತಹ ತೊಂದರೆಗಳಾಗುತ್ತಿದೆ. ಇದಕ್ಕೆ ಉತ್ತರ ತಮ್ಮಲ್ಲಿ ಇಲ್ಲ. ಇಲ್ಲಿಗೆ ಬೇಕಾದಂತಹ ಮಾತ್ರೆ ಔಷಧಿಗಳು ಸಿಗುತ್ತಿಲ್ಲ. ಅಲ್ಲಿ ಒಂದು ಶವಾಗಾರ ಇದೆ, ಅದು ಪೂರ್ಣ ಜೀರ್ಣಾವಸ್ಥೆಯಲ್ಲಿ ಇದೆ. ಅದಕ್ಕೆ ಕಿಟಕಿ, ಬಾಗಿಲುಗಳು, ತೆಗೆದಿದೆ ಅಲ್ಲಿ ನಾಯಿ ಬೆಕ್ಕುಗಳು ಒಳಗೆ ಬರುತ್ತದೆ. ಪೋಸ್ಟ್‌ಮರ್ಟಂ ಮಾಡುವುದಕ್ಕೆ ಆಗುವುದಿಲ್ಲ. ನೀರಿನವ್ಯವಸ್ಥೆಯೂ ಕೂಡ ಇಲ್ಲ. 1998-99 ರಲ್ಲಿ ಸಾಧ್ಯವಾದರೆ ಇದನ್ನು ಸೇರಿಸುತ್ತೇವೆಂದು ಹೇಳಿದ್ದೀರಿ. ಈ ವರ್ಷದ ಅನುದಾನದಲ್ಲಿ ಸಾಕಷ್ಟು ಹಣವನ್ನು ಇಟ್ಟು ಈ ಕೇಂದ್ರವನು ಸುಸಜ್ಜಿತಗೊಳಿಸಿ ಜನರಿಗೆ ತೊಂದರೆಯಾಗದ ಹಾಗೆ ನಿವಾರಿಸಬೇಕೆಂದು ವಿನಂತಿಸುತ್ತೇನೆ.

ಡಾ॥ ಹೆಚ್.ಸಿ. ಮಹದೇವಪ್ಪ : ಸೂರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರ, ಕೇಂದ್ರ ಸರಕಾರದ ಪ್ಯಾಟ್ರನ್‌ನಲ್ಲಿ ಇರತಕ್ಕಂಥದ್ದಾಗಿದೆ. ಕಳೆದ ವರ್ಷ ತಾನೇ ಅದು ಮಂಗಳೂರಿನ ಕಾರ್ಪೊರೇಷನ್‌ಗೆ ಸೇರ್ಪಡೆಯಾಗಿದೆ. ಕುಡಿಯುವ ನೀರಿನ ವ್ಯವಸ್ಥೆಯನ್ನು ಅಲ್ಲಿನ ಜಿಲ್ಲಾ ಪರಿಷತ್‌ನವರು ಮಾಡಬೇಕಾಗುತ್ತದೆ. ನಾವು ಅವರಿಗೆ ಬರೆದು ಬೋರ್‌ವೆಲ್ ಕೊಡಬೇಕೆಂದು ತಿಳಿಸಿದ್ದೇವೆ. ದುರಸ್ತಿ ಕೆಲಸಕ್ಕಾಗಿ ಐ.ಪಿ.ಪಿ. (9)ರ ಕೆಳಗೆ ಕ್ರಮ ತೆಗೆದುಕೊಳ್ಳುತ್ತೇವೆ. ಆ ಆಸ್ಪತ್ರೆ ಜಿ ವೈಪಿ ಪ್ಯಾಟ್ರನ್ ಆಗಿರುವುದರಿಂದ 6 ಬೆಡ್ಸ್‌ಗಳು ಅಲ್ಲಿ ಇರುವುದರಿಂದ 50,000 ರೂಪಾಯಿಯ ಮೆಡಿಸನ್‌ಗಳಿಗೆ ಅನುದಾನ ಇದೆ. ಉಳಿದ ಹಣವನ್ನು ಬಿಡುಗಡೆ ಮಾಡುತ್ತೇವೆ. ಈಗ 30,000 ರೂಪಾಯಿ ಬಿಡುಗಡೆ ಮಾಡಿದ್ದೇವೆ. ಕ್ರಮ ತೆಗೆದುಕೊಳ್ಳುತ್ತೇವೆ. ಐ.ಪಿ.ಪಿ. (9)ರ ಅಡಿಯಲ್ಲಿ ದುರಸ್ತಿ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಅಲ್ಲಿ ಎಕ್ಸ್‌ರೇ ಯೂನಿಟಿ ಇದೆ ಅಲ್ಲಿ ತಂತ್ರಜ್ಞರು ಇಲ್ಲದೇ

ಆಪರೇಟ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಸದಸ್ಯರು ಹಲವಾರು ತಿಂಗಳಿಂದ ತಮ್ಮನ್ನು ಕೇಳುತ್ತಿದ್ದಾರೆ ಅವರಿಗೆ ಅಸ್ವಸ್ಥತೆಯಿಂದ ಬರಲಿಕ್ಕಾಗಲಿಲ್ಲ. ಕ್ಷಯರೋಗ ಯೂನಿಟ್‌ಗೆ ಎಕ್ಸರೇ ಬಹಳ ಅವಶ್ಯಕತೆ ಇದೆ. ಎಕ್ಸರೇ ಯೂನಿಟ್ ಇಲ್ಲಿ ಬಂದಿದೆ ಅದಕ್ಕೆ ಸಂಬಂಧಪಟ್ಟ ತಂತ್ರಜ್ಞರು ಇಲ್ಲದೆ ತೊಂದರೆಯಾಗುತ್ತಿದೆ. ಯಾವಾಗ ಇದನ್ನು ಕೊಡುತ್ತೀರಿ?

ಡಾ॥ ಹೆಚ್. ಸಿ. ಮಹದೇವಪ್ಪ: ಮಾನ್ಯ ಸದ್ಯರು ಕಳೆದ ಸಾರಿ ಖುದ್ದಾಗಿ ಭೇಟಿ ಮಾಡಿ ಹೇಳಿದ್ದರು. ಹಳೆಯ ಎಕ್ಸರೇ ಯೂನಿಟ್ ಬದಲಾವಣೆ ಮಾಡಿ ಹೊಸದನ್ನು ಕೊಟ್ಟಿದ್ದೇವೆ. ತಂತ್ರಜ್ಞಾನದಲ್ಲಿ ಬಳಸುವುದಕ್ಕೆ ಬರದೆ ಪುನ: ಕೆಟ್ಟಿದೆ ಎಂದು ಹೇಳಿದ್ದರು. ಕಳೆದ ವಾರವೇ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಅದು ಕೆಲಸ ಮಾಡುವ ರೀತಿ ಮಾಡುತ್ತೇನೆ.

ವಾಣಿಜ್ಯ ಶಿಕ್ಷಣಕ್ಕೆ ವಿದ್ಯಾರ್ಥಿಗಳ ಪ್ರವೇಶ ಕಡಿಮೆಯಾಗುತ್ತಿರುವುದು

108 (715) ಶ್ರೀ ಅಗರ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ವಾಣಿಜ್ಯ (ಬೆರಳಚ್ಚು ಮತ್ತು ಶೀಘ್ರಲಿಪಿ) ಶಿಕ್ಷಣಕ್ಕೆ ವಿದ್ಯಾರ್ಥಿಗಳ ಪ್ರವೇಶ ಇತ್ತೀಚಿನ ವರ್ಷಗಳಲ್ಲಿ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹೆಚ್ಚಿನ ಬಂಡವಾಳದೊಂದಿಗೆ ಆರಂಭಿಸಿರುವ ಈ ಶಾಲೆಗಳ ವ್ಯವಸ್ಥಾಪಕರುಗಳು ಆರ್ಥಿಕ ಸಂಕಷ್ಟದಲ್ಲಿದ್ದು, ಅವರಿಗೆ ನೆರವು ನೀಡುವ ಬಗ್ಗೆ ಸರ್ಕಾರದ ಏನಾದರೂ ಯೋಜನೆ ರೂಪಿಸಿದೆಯೇ?

3) ಸರ್ಕಾರದ ನೇಮಕಾತಿಗಳಲ್ಲಿ ಬೆರಳಚ್ಚು ಜ್ಞಾನವನ್ನು ಕಡ್ಡಾಯಮಾಡುವ ಅಥವಾ ಕಂಪ್ಯೂಟರ್ ಶಿಕ್ಷಣವನ್ನು ವಾಣಿಜ್ಯ ಶಿಕ್ಷಣಕ್ಕೆ ಸೇರಿಸಿ ಭೋದಿಸುವ ಪಠ್ಯ ಕ್ರಮ ಅಳವಡಿಸುವ ಕುರಿತು ಸರ್ಕಾರದ ಕಡೆಯಿಂದ ಏನಾದರೂ ಚಿಂತನೆ ನಡೆದಿದೆಯೇ, ಇಲ್ಲವಾದಲ್ಲಿ ಈ ಯೋಜನೆಗಳನ್ನು ಅಳವಡಿಸಲು ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು.

ಡಾ॥ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

1) ಹೌದು

2) ಇಲ್ಲಾ

3) ಸರ್ಕಾರದ ಸಾಮಾನ್ಯ ನೇಮಕಾತಿ ನಿಯಮದಲ್ಲಿ ಬೆರಳಚ್ಚು ಕಡ್ಡಾಯಗೊಳಿಸಿಲ್ಲ. ಪ್ರಾಥಮಿಕ ಹಂತದ ಕಂಪ್ಯೂಟರ್ ಶಿಕ್ಷಣವನ್ನು ವಾಣಿಜ್ಯ ಶಾಲೆಗಳಲ್ಲಿ ಅಳವಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಆರಗ ಜ್ಞಾನೇಂದ್ರ: ಸರಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ದೈನಂದಿನ ಕೆಲಸ ಸುಗಮವಾಗುವುದಕ್ಕೆ 1ನೇ, 2 ನೇ ದರ್ಜೆ ಗುಮಾಸ್ತರುಗಳಿಗೆ ಟೈಪಿಂಗ್ ತರಬೇತಿ ಕೊಡುವ ಮೂಲಕ ಹಲವಾರು ವರ್ಷಗಳಿಂದ ಈ ರಾಜ್ಯದಲ್ಲಿನ ಕಾಮರ್ಸ್ ಸಂಸ್ಥೆಗಳು ಒದಗಿಸುತ್ತಾ ಬಂದಿದೆ. ಸರಕಾರ ಇದಕ್ಕಾಗಿ ಅವರಿಗೆ ಯಾವುದೇ ಅನುದಾನ ಸಹಾಯ ಕೊಟ್ಟಿರುವುದಿಲ್ಲ. ಆದರೂ ಕೂಡ ಅವರು ಅನೂಚಾನವಾಗಿ ನಡಿಸಿಕೊಂಡು